ಭೂಮಿಗೆ ಚಂದ್ರನ ಒಂದು ಮುಖವಷ್ಟೇ ಕಾಣುತ್ತದಂತೆ. ನನ್ನ ಪ್ರಾಣಮಿತ್ರರ ನಿಕ್ಕರಿನ ಈ ಚಂದ್ರಾಕೃತಿಯಲ್ಲಿ ಮಾತ್ರ ಇಡೀ ಭೂಮಿಯೇ ಕಾಣುತ್ತಿತ್ತು. ಮತ್ತು ಅದೇ ಭೂಮಂಡಲವನ್ನು ಹೊತ್ತು ಎಗ್ಗಿಲ್ಲದೇ ಶಾಲೆಯ ಒಳಹೊರಗಿನ ಕಕ್ಷೆಯನ್ನೆಲ್ಲಾ ಸುತ್ತುತ್ತಿದ್ದರು. ನೋಡುವವರ ಕಣ್ಣು ಗಟ್ಟಿಗಿರಬೇಕಿತ್ತಷ್ಟೆ! ಕೆಲವು ಹುಡುಗಿಯರಿಗೆ ಒಮ್ಮೊಮ್ಮೆ ಸೂರ್ಯ ಚಂದ್ರ ಗ್ರಹಣಗಳು ಒಟ್ಟಿಗೇ ಕಂಡಂತಾಗಿ ಕಣ್ಣು ಕತ್ತಲಿಡುತ್ತಿತ್ತು. ಪುಣ್ಯಕ್ಕೆ ಹೇಗೋ ಸಾವರಿಸಿಕೊಂಡು ಮನೆ ಸೇರುತ್ತಿದ್ದರು.

ವಿಷಯ ಅದಲ್ಲ. ಈ ಮುಗ್ಧ ಗೆಳೆಯರು ಅಪ್ರತಿಮ ಬಾಂಬು ವೀರರೂ ಆಗಿರುತ್ತಿದ್ದರು. ಯಾವುದೇ ಆಂಟಿ ಸಬ್ಮಾಟೇಜು ಟೀಮಿಗೂ ಜಗ್ಗದ ಕೆಮಿಕಲ್ಲು ಬಾಂಬುಗಳನ್ನು ತೇಲಿಬಿಡುವುದರಲ್ಲಿ ಪ್ರವೀಣರಿದ್ದರು. ಕನಿಷ್ಠ ಮುನ್ಸೂಚನೆಯೂ ಇಲ್ಲದೆ ಹಾಗೇ ಒಗಾಯಿಸಿಬಿಡುತ್ತಿದ್ದರು. ಅದಕ್ಕೆ ಹೊತ್ತು ಗೊತ್ತಿರಲಿಲ್ಲ. ಚಡ್ಡಿಯಲ್ಲಿನ ದಿಡ್ಡಿ ಬಾಗಿಲು ಬೇರೆ ತೆರೆದಿರುತ್ತಿತ್ತಾದ್ದರಿಂದ ಯಾವ ಅಡೆತಡೆಯೂ ಇಲ್ಲದೆ ರಾಕೆಟ್ಟು ದಾಳಿ ನಡೆಯುತ್ತಿತ್ತು. ಹೀಗಾಗಿ, ನಾವು ಸದಾ ಸನ್ನದ್ಧ ಸ್ಥಿತಿಯಲ್ಲಿರಬೇಕಾದ್ದು ಅನಿವಾರ್ಯವಿತ್ತು.

ಇದು ದೋಸ್ತಿಗಳ ಕಥೆಯಾಯಿತು. ಇನ್ನು ಅಪರಿಚಿತರು, ಅನಾಮಿಕರು ಸಭ್ಯರ ಸೋಗಿನಲ್ಲಿ ಹತ್ತಿರ ನುಸುಳುವವರ ಜೋಳಿಗೆಯಲ್ಲಿ ಎಂತೆಂಥಾ ಸ್ಫೋಟಕಗಳಿರುತ್ತವೆಂದು ಅನುಭವಿಸಿದವರಿಗೇ ಗೊತ್ತು. ಆಕ್ಸಿಜನ್ ರಿಚ್ಚು ಗಾಳಿ ಸಿಗ್ತದೆ... ಸೂರ್ಯ ಮೂಡೋಕೆ ಮುಂಚೆ ಮರಗಳಿರೋ ಕಡೆ ವಾಕ್ ಮಾಡ್ಬೇಕು ಸಾರ್... ಅನ್ನುತ್ತ ಪರಿಚಿತರೊಬ್ಬರು ನನ್ನನ್ನು ಊರಲ್ಲಿದ್ದ ಸಣ್ಣ ಪುಟ್ಟ ಪಾರ್ಕುಗಳಿಗೆಲ್ಲಾ ಕರೆದೊಯ್ಯುತ್ತಿದ್ದರು. ಅವರ ಸದುದ್ದೇಶದ ಬಗ್ಗೆ ಎರಡು ಮಾತೇನಿರಲಿಲ್ಲ. ಆದರೆ, ನನ್ನ ನಸೀಬೇ ಸುಮಾರಿತ್ತು! ಆತ ಆ ಪರಿಯ ರಾಸಾಯನಿಕ ತಜ್ಞನೆಂಬುದು ಗೊತ್ತಾಗುವಷ್ಟರಲ್ಲಿ ನಾನವನ ಕೈಗೊಂಬೆಯಾಗಿಬಿಟ್ಟಿದ್ದೆ. ನಿರಾಕರಿಸುವಂತಿಲ್ಲ, ಬಿಡುವಂತಿಲ್ಲ... ಸತತ ಆರು ತಿಂಗಳ ಕಾಲ ಆತ ನನ್ನ ಮೇಲೆ ವಿವಿಧ ಕೋನಾಂತರಗಳಿಂದ ಪ್ರಯೋಗಗಳನ್ನು ನಡೆಸಿದ ಫಲವಾಗಿ ನಾನು ಅನವಶ್ಯಕವಾಗಿ ಕೃಶಗೊಂಡೆನಲ್ಲದೆ ನಾಟಿ ಔಷಧಗಳ ನೆರವಿನಿಂದ

